## 9 ನೇ ತರಗತಿ ಅರ್ಧವಾರ್ಷಿಕ ಪರೀಕ್ಷೆ ಮಾದರಿ ಪ್ರಶ್ನೆಪತ್ರಿಕೆ

**ವಿಷಯ : ವಿಜ್ಞಾನ ,** **ಸಮಯ: 3 ಗಂಟೆ,** **ಒಟ್ಟು ಅಂಕಗಳು : 80**

### ಭಾಗ : A ಭೌತವಿಜ್ಞಾನ

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **3 x 1 = 3**

1. 100m ವ್ಯಾಸವುಳ್ಳ ವೃತ್ತೀಯ ಪಥದಲ್ಲಿ ಓಟಗಾರನೊಬ್ಬ ಒಂದು ಸುತ್ತನ್ನು 30s ಗಳಲ್ಲಿ ಪೂರ್ಣಗೊಳಿಸಿದ್ದಾನೆ. 2ನಿಮಿಷಗಳ ಅವಧಿಯಲ್ಲಿ ಅವನ ಸ್ಥಾನಪಲ್ಲಟ,




A) 100 ಮೀ B) 200 ಮೀ C) 0 D) 50 ಮೀ

2. ದ್ರವ್ಯರಾಶಿ m ಮತ್ತು ವೇಗ $v$ ಹೊಂದಿರುವ ವಸ್ತುವಿನ ಸಂವೇಗ

A) $(mv)^2$ B) $mv^2$ C) $\frac{1}{2}mv^2$ D) $mv$

3. ಒತ್ತಡದ ಅಂತರರಾಷ್ಟ್ರೀಯ ಏಕಮಾನ

A) ಜೌಲ್ B) ಪಾಸ್ಕಲ್ C) ಕ್ಯಾಲೋರಿ D) ಸೆಲ್ಸಿಯಸ್

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **2 x 1 = 2**

4. ನ್ಯೂಟನ್‌ರ ಚಲನೆಯ ಮೂರನೇ ನಿಯಮ ಬರೆಯಿರಿ
5. ನೀರಿನ ಮೇಲಿಟ್ಟ ವಸ್ತುವೊಂದು ತೇಲಲು ಅಥವಾ ಮುಳುಗಲು ಕಾರಣವೇನು ?

**III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **3 x 2= 6**

6 ಚಲಿಸಿದ ದೂರ ಮತ್ತು ಸ್ಥಾನಪಲ್ಲಟಕ್ಕಿರುವ ವ್ಯತ್ಯಾಸ ಬರೆಯಿರಿ.

7. ಸರೋವರವೊಂದರ ಮೇಲೆ ಯಾಂತ್ರಿಕ ದೋಣಿಯೊಂದು ನಿಶ್ಚಲ ಸ್ಥಿತಿಯಿಂದ ಸರಳರೇಖೆಯಲ್ಲಿ 8s ಚಲಿಸಿ $3ms^{-2}$ ವೇಗೋತ್ಕರ್ಷಕ್ಕೆ ಒಳಗಾಗಿದೆ. ಈ ಅವಧಿಯಲ್ಲಿ ಯಾಂತ್ರಿಕ ದೋಣಿ ಚಲಿಸಿದ ದೂರವೆಷ್ಟು?

8. ಒಂದು ತೆಳುವಾದ ಮತ್ತು ಬಲಿಷ್ಟವಾದ ದಾರದಿಂದ ಮಾಡಲ್ಪಟ್ಟ ಒಂದು ಶಾಲಾ ಬ್ಯಾಗ್‌ನ ಪಟ್ಟಿಯನ್ನು ಹಿಡಿದುಕೊಳ್ಳುವುದು ಕಷ್ಟಕರ. ಏಕೆ?

**IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **3 x 3 = 9**

9. ಒಂದು ವಸ್ತುವಿನ ರಾಶಿ ಮತ್ತು ಅದರ ತೂಕ. ಇವುಗಳ ನಡುವಿನ ವ್ಯತ್ಯಾಸವೇನು ?

10. (a) ಒಂದು ರಬ್ಬರ್ ಚೆಂಡು ಅಥವಾ ಅದೇ ಅಳತೆ ಇರುವ ಒಂದು ಕಲ್ಲು – ಇವುಗಳಲ್ಲಿ ಯಾವುದು ಹೆಚ್ಚಿನ ಜಡತ್ವವನ್ನು ಹೊಂದಿದೆ? ನಿಮ್ಮ ಉತ್ತಕ್ಕೆ ಸೂಕ್ತ ಕಾರಣ ನೀಡಿ.

(b) ಜಡತ್ವ ಎಂದರೇನು?

ಅಥವಾ

ಜೋರಾಗಿ ಮರದ ಟೊಂಗೆಗಳನ್ನು ಅಲುಗಾಡಿಸಿದಾಗ ಕೆಲವು ಎಲೆಗಳು ಅದರಿಂದ ಬೇರ್ಪಡುತ್ತವೆ. ಏಕೆ?ವಿವರಿಸಿ. ಈ ಮೇಲಿನ ಸಂದರ್ಭಕ್ಕೆ ಸೂಕ್ತ ಕಾರಣವನ್ನು ವಿವರಿಸಲು ಸಹಾಯಕವಾದ ನಿಯಮವನ್ನು ನಿರೂಪಿಸಿ.

11. ವಿಶ್ವವ್ಯಾಪಿ ಗುರುತ್ವ ನಿಯಮವನ್ನು ನಿರೂಪಿಸಿ.ವಿಶ್ವವ್ಯಾಪಿ ಗುರುತ್ವ ನಿಯಮದ ಪ್ರಾಮುಖ್ಯತೆಗಳೇನು?

LIVEWORKSHEETS